**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 958/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ03**

**ದಿನಾಂಕಃ 21.11.2025** **ಸಿಡಬ್ಲ್ಯೂ03**

| | |
|---|---|
| ಹೆಸರು | ಕುಬೇರಗೌಡ |
| ತಂದೆ ಹೆಸರು | ಬಸಪ್ಪ |
| ವಯಸ್ಸು | 61 |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ನಂದಿತಾವರೆ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ 1 ಮತು 2 ರವರ ಪರಿಚಯವಿದೆ. ಚಾಸಾ 5 ರವರ ಪರಿಚಯವಿದೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ಅವರ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ದಾಖಲೆ ಪಂಚರರಿಗೆ ನೀಡದ ನೋಟಿಸ್ ಆಗಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ಅವರ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ದಾಖಲೆ ಸ್ಥಳ ಮತ್ತು ಅಮಾನತು ಪಂಚನಾಮೆಯಾರಿದ್ದು ಅದನ್ನು ನಿಪಿ 3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ಅವರ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ದಾಖಲೆ ಕಚ್ಚಾ ನಕಾಶೆ ಆಗಿದ್ದು ಅದನ್ನು ನಿಪಿ 4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ4 ಎ ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಈಗೆ ಸುಮಾರು 6 ತಿಂಗಳ ಹಿಂದೆ ನಂದಿತಾವರೆಯಲ್ಲಿರುವ ಚಾಸಾ 1 ರವರ ಮನೆಯಲ್ಲಿ ಮಾಡಿರುತ್ತೇನೆ. ಸದರಿ ಸಹಿಗಳನ್ನು ಪೋಲೀಸರು ಸ್ಥಳಕ್ಕೆ ಪಂಚನಾಮೆ ಮಾಡಲು ಬಂದ ಸಂದರ್ಭದಲ್ಲಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು 1 ನೇ ಆರೋಪಿ ಶಿವಾಲಯ ನವರು ರವೀಂದ್ರಯ್ಯ ನವರು ಚಾಸಾ 4 ರವರಿಗೆ ಹಲ್ಲೆ ಮಾಡಿರುವ ವಿಚಾರವಾಗಿ ಸಹಿ ಮಾಡಿರುತ್ತೇನೆ. ಸ್ಥಳದಲ್ಲಿ ಪೋಲೀಸರು ಪಂಚನಾಮೆ ಕಾಲಕ್ಕೆ ಒಂದು ಕಲ್ಲು ಮತ್ತು ಒಂದು ಟಾವೆಲ್ ನ್ನು ಜಪ್ತುಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಗುರುತಿಸಿದ ಕಲ್ಲನ್ನು ಈಗಾಗಲೇ ಮು ಮಾ 1 ಎಂದು ಗುರುತಿಸಲಾಗಿದೆ. ಸಾಕ್ಷಿಯು ಗುರುತಿಸಿದ ಒಂದು ಟವೆಲ್ ನ್ನು ಮು ಮಾ 2 ಎಂದು ಗುರುತಿಸಲಾಯಿತು. ಸದರಿ ಸಂದರ್ಭದಲ್ಲಿ ನಾನು, ಚಾಸಾ 2 ಮತ್ತು 4 ರವರು ಇದ್ದೇವು. ಸದರಿ ಸಂದರ್ಭದಲ್ಲಿ ಪಂಚನಾಮೆ ಕಾಲಕ್ಕೆ

ಪೋಲಿಸರು ಛಾಯಾ ಚಿತ್ರಗಳನ್ನು ತೆಗೆದಿರುತ್ತಾರೆ. ಸದರಿ ಛಾಯಾ ಚಿತ್ರಗಳನ್ನು ನಿಪಿ 5 ರಿಂದ 7 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಹೆಚ್ ಬಿ ವಕೀಲರಿಂದಃ**

ನಿಪಿ 3 ಮತ್ತು 4 ರಲ್ಲಿ ಬರೆದಿರುವ ಅಂಶಗಳು ನನಗೆ ನೆನಪಿಲ್ಲ. ಸ್ಥಳದಲ್ಲಿ ಪೋಲಿಸರು ಕಲ್ಲು ಮತ್ತು ಟವಲ್ ಮೇಲೆ ನನ್ನ ಸಹಿಯನ್ನು ಪಡೆದುಕೊಂಡಿಲ್ಲ . ನಿಪಿ 2, 3 ಮತ್ತು 4 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1, 4 ಮತ್ತು ನಾನು ಸಂಬಧಿಕರು ಎಂದರೆ ಸರಿಯಲ್ಲ. ಚಾಸಾ 1,4 ಮತ್ತು ನಾನು ಒಂದೇ ಜನಾಂಗದವರು ಎಂದರೆ ಸರಿ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರು ಸಹ ಚಾಸಾ 1 ರವರಿಗೆ ಸಹಾಯವಾಗಲು ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಪೋಲಿಸರು ಸ್ಥಳಕ್ಕೆ ಬಂದ ಸಂದರ್ಭದಲ್ಲಿ ಚಾಸಾ 1 ರವರು ಇರಲಿಲ್ಲ.

**ಮರುವಿಚಾರಣೆಃ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)**

ಓದಿ ಹೇಳಿ ಕೇಳಿ ಸರಿ ಇದೆ.

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ